# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.260/2014

| | | | |
|---|---|---|---|
| ಚಾಸಾ | **3** | ಪ್ರಾಸಾ | **2** |
| ಹೆಸರು | | ಬಿ ಶಿವಲಿಂಗಯ್ಯ | |
| ತಂದೆಯ ಹೆಸರು | | ಲೇಟ್ ಬಸವೇಗೌಡ | |
| ವಯಸ್ಸು | | **65** ವರ್ಷಗಳು | |
| ಉದ್ಯೋಗ | | ನಿವೃತ್ತ ಸಂಚಾರ ನಿಯಂತ್ರಣಾಧಿಕಾರಿಗಳು | |
| ವಿಳಾಸ | | ಕನಕಪುರ | |

ದಿನಾಂಕ**.29.04.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು**.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ**.** ಚಾಸಾ**-1,** ಚಾಸಾ**-2,** ಚಾಸಾ**-4** ರಿಂದ ಚಾಸಾ**-8** ರವರ ಪೈಕಿ ಚಾಸಾ**-1, 2, 4, 5, 6** ಮತ್ತು **8** ರವರು ಮಾತ್ರ ಗೊತ್ತು**.**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ದಿನಾಂಕ.07.09.2012ರಂದು ಬೆಳಿಗ್ಗೆ 11ಕಾಲಿಗೆ ನಮ್ಮ ಇಲಾಖೆಯ ಸಿಬ್ಬಂದಿಯಾದ ವಿ. ಸಿದ್ದಪ್ಪ ಎನ್ನುವವರು ಡಿಪೋದಲ್ಲಿ ಕ್ಯಾಶ್ ಕಟ್ಟಿ ಹಾರೋಹಳ್ಳಿಗೆ ಹೋಗಲು ಬಸ್ಸಿ ಗಾಗಿ ಡಿಪೋನ ಎದುರಿಗೆ ಇರುವ ರಸ್ತೆಯ ಬಳಿ ನಿಂತಿದ್ದರು. ಆಗ ಅವರ ಜೊತೆಯಲ್ಲಿ ನಾನು ಸಹ ನಿಂತಿದ್ದೆ. ಹಾರೋಹಳ್ಳಿಯಿಂದ ಬೆಂಗಳೂರಿನ ಕಡೆಗೆ ಒಬ್ಬ ಬೈಕ್ ಸವಾರನು ತಮ್ಮ ಬೈಕನ್ನು ಜೋರಾಗಿ ಚಾಲನೆ ಮಾಡಿಕೊಂಡು ಬಂದು ವಿ.ಸಿದ್ದಪ್ಪ ರವರು ನಿಂತ ಜಾಗಕ್ಕೆ ಬಂದು ಅವರ ಕಾಲಿನ ಎರಡು ಕಾಲುಗಳ ನಡುವೆ ಬೈಕನ್ನು ನುಗ್ಗಿಸಿ ಅವರನ್ನು ಸುಮಾರು ದೂರ ಎಳೆದುಕೊಂಡು ಹೋಗಿರುತ್ತಾರೆ. ಆಗ ಸಿದ್ದಪ್ಪ ರವರ ತಲೆಗೆ, ಹಣೆಗೆ, ಕೈಗೆ ಮತ್ತು ಎರಡು ಕಾಲಿಗೆ ಏಟಾಯಿತು. ಬೈಕ್ ಸವಾರನಿಗೂ ಆ ದಿನ ಸ್ವಲ್ಪ ಏಟಾಗಿತ್ತು, ಆಗ ಸಿದ್ದಪ್ಪ ಮತ್ತು ಬೈಕ್ ಸವಾರ ಇಬ್ಬರನ್ನು ಆಂಬ್ಯೂಲೆನ್ಸ್ ನಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಆಮೇಲೆ ಸಿದ್ದಪ್ಪ ರವರು ತೀರಿಕೊಂಡರು ಎಂಬ ವಿಚಾರ ನನಗೆ ತಿಳಿಯಿತು. ಆ ದಿನ ಬೈಕ್ ಚಾಲಕನು ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ಸಂಖ್ಯೆ ಕೆಎ-42-ಕೆ-570 ಆಗಿರುತ್ತದೆ.

ಪೊಲೀಸರು ಅದೇ ದಿನ ಮಧ್ಯಾಹ್ನ **3.30** ರಿಂದ **4.30**ರ ವರೆಗೆ ನನ್ನ, ಚಾಸಾ-**1** ಮತ್ತು ಚಾಸಾ-**2** ರವರ ಸಮಕ್ಷಮ ಸ್ಥಳದಲ್ಲಿ ಪರಿಶೀಲನೆ ಮಾಡಿ ಮಹಜರ್ ಮಾಡಿ ಬೈಕನ್ನು ತೆಗೆದುಕೊಂಡು ಹೋಗಿರುತ್ತಾರೆ. ನಾನು ಈ ಮೇಲಿನ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರವರು ಅನುಮತಿ ಕೋರಿದ್ದು, ಅನುಮತಿಯನ್ನು ನೀಡಲಾಯಿತು.

ಪಾಟೀ ಸವಾಲು ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-

ಆ ದಿನ ದ್ವಿಚಕ್ರ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಸಿದ್ದಪ್ಪ ರವರಿಗೆ ಅಪಘಾತ ಮಾಡಿರುವುದು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ ಮತ್ತು ನಾನು ಅವರನ್ನು ಅಪಘಾತದ ಸಮಯದಲ್ಲಿ ಸ್ಥಳದಲ್ಲಿ ನೋಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ-

ಆರೋಪಿ ಪರ ವಕೀಲರನ್ನು ನಾಲ್ಕು ಬಾರಿ ಕೂಗಿಸಲಾಯಿತು, ಆರೋಪಿಯು ಹಾಜರಿದ್ದು, ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದೆ

ಇರುವ ಕಾರಣಕ್ಕೆ ಆರೋಪಿಯ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**